ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ .....01.....

..... ಕಡತದ ಸಂಖ್ಯೆ ಎಇಇ/ಕೆಂಪ/ಪಿಆರ್/230/22-23

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು Date-16/03/2023

ಸಲ್ಲಿಸಿದೆ.

ವಿಷಯ:– **Improvements Roads from NH-07 to Sanjeevininagar up to Hebbala Sarovara layout in Ward No.07 and Ward No.08 in Kodigehalli Sub Division.**

ಉಲ್ಲೇಖ:– 1. ಸರ್ಕಾರಆದೇಶ ಸಂಖ್ಯೆ: ನಅಇ 375ಎಂಎನ್‌ವೈ 2018, ಬೆಂಗಳೂರು, ದಿ: 20.09.2019

2. ಸರ್ಕಾರ ಆದೇಶ ಸಂಖ್ಯೆ: ನಅಇ 214 ಎಂಎನ್‌ವೈ 2022 (ಇ), ಬೆಂಗಳೂರು, ದಿ: 08.09.2022

–*****–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Improvements Roads from NH-07 to Sanjeevininagar up to Hebbala Sarovara layout in Ward No.07 and Ward No.08 in Kodigehalli Sub Division. CM Nava Nagarottana .ಪ್ಯಾಕೇಜ್ ಕ್ರಿಯಾ ಯೋಜನೆಯ ಕ್ರಮ ಸಂಕ್ಯೆ:06ರ ಅನುಬಂಧ–10 ರಲ್ಲಿ ಮಂಜೂರಾಗಿರುವ "ರಕ್ಷಣಾ ಇಲಾಖೆಯಿಂದ ಪಡೆದುಕೊಳ್ಳಬೇಕಾಗಿರುವ ಜಮೀನಿನಲ್ಲಿ ಅನುಷ್ಠಾನಗೊಳಿಸಬೇಕಾಗಿರುವ ಯೋಜನೆಗಳು" ಪಟ್ಟಿಯಲ್ಲಿ (ಸರ್ಕಾರದ ಆದೇಶ ಪ್ರತಿ ಲಗತ್ತಿಸಿದೆ) ಅನುಮೋದನೆಯಾಗಿದ್ದ ಒಟ್ಟು ರೂ.74.00 ಕೋಟಿಗಳ ಪೈಕಿ ಬ್ಯಾಟರಾಯನಪುರ ವಿಭಾಗ ಕಛೇರಿಗೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ:02 ಮತ್ತು 03 ರಲ್ಲಿ ರೂ.50.00 ಲಕ್ಷದಂತೆ ಪ್ರತ್ಯೇಕ ಎರಡು ಕಾಮಗಾರಿಗಳು ಮಂಜೂರಾಗಿದ್ದು, ಅದರಂತೆ ಕಾಮಗಾರಿಗೆಟೆಂಡರ್ ಅಹ್ವಾನಿಸಿ ಎಲ್–1 ಗುತ್ತಿಗೆದಾರರಾದ **M/s. SMLP Asphalts, Prop B.B.Umesha, Bangalore** ರವರಿಗೆ ದಿನಾಂಕ:24-11-2022ರಂದು ರೂ.91,82,268.05 ಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಕಾರ್ಯಾದೇಶ ನೀಡಿರುತ್ತಾರೆ.

ಸದರಿ ಕಾಮಗಾರಿಯ ನಿರ್ವಹಣೆಯ ಸಮಯದಲ್ಲಿ ಅಗತ್ಯಕ್ಕೆ ತಕ್ಕಂತೆ ಕೆಲವೊಂದು ಅಂಶಗಳ ಪರಿಮಾಣಗಳು ಬದಲಾವಣೆಗೊಂಡಿದ್ದು, ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಕಾಮಗಾರಿ ನಿರ್ವಹಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

- ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಸ್ಥಳೀಯ ಶಾಸಕರ ಮೌಖಿಕ ಆದೇಶದ ಮತ್ತು ಜನಪ್ರತಿನಿಧಿಗಳ ಕೋರಿಗೆ ಮೇರೆಗೆ ಶಾಂತಿವನ 2ನೇ ರಸ್ತೆಯಲ್ಲಿ ಎಡ ಮತ್ತು ಬಲಭಾಗದಲ್ಲಿ RCC Precast Covering Slab 100 MM and 250 MM ನ್ನು ಅಳವಡಿಸಿಕೊಂಡು ಚರಂಡಿಯ ಕಾಮಗಾರಿಯನ್ನು ನಿರ್ವಹಿಸುವುದು ಅವಶ್ಯವಾಗಿದೆ. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸಾಮಾನ್ಯ ಉಳಿತಾಯದಲ್ಲಿ ಭರಿಸಿ ಕೈಗೊಳ್ಳಲು ಉದ್ದೇಶಿಸಿದೆ. ಒಟ್ಟಾರೆ ಉಳಿತಾಯವಾಗುವ ಅಂದಾಜು ವೆಚ್ಚದಲ್ಲಿ ಭರಿಸಿ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯರೂಪಕ್ಕೆ ತೆಗೆದುಕೊಳ್ಳಲು ಸೂಚಿಸಿದ್ದು, ಈ ಬಗ್ಗೆ ಇ.ಐ.ಆರ್.ಎಲ್ ಹಾಗೂ ವರ್ಕ್‌ಸ್ಲಿಪ್‌ಗಳನ್ನು ತಯಾರಿಸಿ ಅನುಮೋದನೆ ಪಡೆಯಲು ಸೂಚಿಸಿರುತ್ತಾರೆ.

- ಆದಕಾರಣ ಮೇಲೆ ವಿವರಿಸಿರುವ ಸಕಾರಣಗಳ ಹಿನ್ನೆಲೆಯಲ್ಲಿ ಕೆಲವೊಂದು ಅಂಶಗಳ ಪರಿಮಾಣಗಳು ಹೆಚ್ಚಾಗಿದ್ದು, ರೂ.13,41,928.28 ಮೊತ್ತದ ವರ್ಕ್‌ಸ್ಲಿಪ್ ತಯಾರಿಸಲಾಗಿದೆ ಹಾಗೂ ಇ.ಐ.ಆರ್.ಎಲ್‌ನ್ನು ಮೊತ್ತ ರೂ.12,86,290.48 ಗಳಿಗೆ ತಯಾರಿಸಲಾಗಿದೆ.

ಮೇಲಿನ ಅಂಶಗಳ ಪರಿಮಾಣುಗಳಿಗೆ Work slip ಅನ್ನು ರೂ. 13,41,928.28 ಮೊತ್ತಕ್ಕೆ ತಯಾರಿಸಿದ್ದು, ಈ ಮೊತ್ತವುಗುತ್ತಿಗೆ ಮೊತ್ತಕ್ಕೆ ಹೋಲಿಸಿದಾಗ ಶೇ.14.61% ರಷ್ಟು ಮತ್ತು EIRL ರೂ. 12,86,290.48 ಮೊತ್ತವುಗುತ್ತಿಗೆ ಮೊತ್ತಕ್ಕೆ ಹೋಲಿಸಿದಾಗ ಶೇ.14.01% ರಷ್ಟು ವ್ಯತ್ಯಾಸವಾಗಿರುತ್ತದೆ

ಅನುಮೋದಿತ ಅಂದಾಜು ಮೊತ್ತ	ಅನುಮೋದಿತ ಟೆಂಡರ್ ಮೊತ್ತ	ಗುತ್ತಿಗೆದಾರರ ಟೆಂಡರ್ ಮೊತ್ತ	Work slip ಮೊತ್ತ ಹಾಗೂ ಶೇಕಡಾ ವ್ಯತ್ಯಾಸ	EIRL ಮೊತ್ತ ಹಾಗೂ ಶೇಕಡಾ ವ್ಯತ್ಯಾಸ
ರೂ.1,00,00,000	ರೂ.87,47,158.57	ರೂ.91,82,268.05	ರೂ. 13,41,928.28 (14.61%)	ರೂ.12,86,290.48 (14.01%)

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, Work slip ಮೊತ್ತವನ್ನು ರೂ. 13,41,928.28 ಮತ್ತು EIRL ರೂ. 12,86,290.48 ಮೊತ್ತವು ಅನುಮೋದಿತ ಅಂದಾಜು ಮೊತ್ತದ ಒಳಗೆಯೇ ಸರಿದೂಗಿಸಬಹುದಾಗಿರುವ ಹಿನ್ನೆಲೆಯಲ್ಲಿ ಹಾಗೂ ಈ ವ್ಯತ್ಯಾಸದಿಂದ ಯಾವುದೇ ತರಹದ ಆರ್ಥಿಕ ಹೊಣೆಗಾರಿಕೆ ಉಂಟಾಗುವುದಿಲ್ಲ ಎಂಬುದನ್ನು ಅಭಿಪ್ರಾಯಿಸುತ್ತಾ ಸದರಿ Work slip ಗೆ ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

-03-

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ ಪಾಲಿಕೆಗೆ ಯಾವುದೇ ಹೆಚ್ಚುವರಿಆರ್ಥಿಕ ಹೊರೆಇಲ್ಲದೆ ಮೂಲ ಅಂದಾಜು ಮತ್ತು ಲಭ್ಯವಾಗುವ ವಂತಿಕೆಯ ಮಿತಿಯೊಳಗೆ ಈ ಪ್ಯಾಕೇಜ್‌ಕಾಮಗಾರಿಯ ಈ ಕೆಳಗಿನ ಅಂಶಗಳಿಗೆ ಅನುಮೋದನೆಕೋರಿದೆ.

1. ವರ್ಕ್‌ಸ್ಲಿಪ್ ಮೊತ್ತ ರೂ. 13,41,928.28 ಲಕ್ಷಗಳಿಗೆ ಅನುಮೋದನೆ.
2. ಇ.ಐ.ಆರ್.ಎಲ್ ಮೊತ್ತ ರೂ. 12,86,290.48 ಲಕ್ಷಗಳಿಗೆ ಅನುಮೋದನೆ

ಕಿರಿಯ ಅಭಿಯಂತರರು
ವಾರ್ಡ್ ನಂ. 08

ಸಹಾಯಕ ಕಾರ್ಯಪಾಲಕ ಅಬಿಯಂತರರು
ಕೊಡಿಗೇಹಳ್ಳಿ ಉಪವಿಭಾಗ

ಕಾರ್ಯಪಾಲಕ ಅಬಿಯಂತರರು
ಬ್ಯಾಟರಾಯನಪುರ ವಿಭಾಗ,

C.E (Y/K)

ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗರವರು ತಿಳಿಸಿರುವಂತೆ, **Improvements to road from NH-7 to Sanjivini Nagara upto Hebbal sarovara Layout in ward no-07 and ward no-8 in Kodigehalli sub division,** ಕಾಮಗಾರಿಯನ್ನು ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ಪಟ್ಟಿಯಲ್ಲಿನ ಮಂಜೂರಾದ ಪರಿಮಾಣಗಳಿಗಿಂತ ಕೆಲವು ಅಂಶಗಳು ಹೆಚ್ಚು/ಕಡಿಮೆಯಾಗಿರುತ್ತದೆ ಅದರಂತೆ ಸ್ಥಳಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಲು ಪರಿಮಾಣದ ಅಂಶಗಳು ಈ ಕೆಳಕಂಡಂತಿರುತ್ತದೆ.

1. ಕಾಮಗಾರಿಯ ಅಂದಾಜು ಮೊತ್ತ ರೂ.**100.00**ಲಕ್ಷಗಳು
2. ಮಾರ್ಪಾಡು ಅಂದಾಜು ಮೊತ್ತ ರೂ.**1,02,81,238.13**ಗಳು**(Inluding GST)**
3. ವರ್ಕ್‌ಸ್ಲಿಪ್ ಮೊತ್ತ ರೂ.**13,41,928.28(14.61%)**ಗಳು
4. ಇಐಆರ್‌ಎಲ್ ಮೊತ್ತ ರೂ.**12,86,290.48(14.01%)**ಗಳು

ಮೇಲ್ಕಂಡ ಮೊತ್ತವನ್ನು ಟೆಂಡರ್ ಕಾಮಗಾರಿಯ ಉಳಿತಾಯ ಮೊತ್ತದಲ್ಲಿ ಭರಿಸಲು, ವರ್ಕ್‌ಸ್ಲಿಪ್, ಇಐಆರ್‌ಎಲ್ ಮತ್ತು ಮಾರ್ಪಾಡು ಅಂದಾಜುಪಟ್ಟಿಗೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ)ರವರು ಅನುಮೋದನೆ ಕೋರಿದ್ದು, ಮುಂದಿನ ಆದೇಶಕ್ಕೆ ಸಲ್ಲಿಸಿದೆ.

ಮುಖ್ಯ ಅಭಿಯಂತರರು (ಯ.ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಷಯ :

ಪುಟದ ಸಂಖ್ಯೆ ..... — OH —

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು